ಪ್ರಾಧಿಕಾರದ ಹುದ್ದೆಯಾಕಿನ ಅವಧಿಮಿತಿ ಮತ್ತು ನಿಬ್ಬಂಧಿ ಮಂಜೂರಾತಿಯೊಂದಿಗೆ ಹಂತ ಹಂತವಾಗಿ ಪ್ರಾರಂಭಿಸಲಾಗುವುದು.

ಮೈಸೂರು ನಗರದಲ್ಲಿರುವ ಗ್ರಂಥಾಲಯಗಳು	
ಕೇಂದ್ರ ಗ್ರಂಥಾಲಯ, ಸಯ್ಯಾಜಿರಾವ್ ರಸ್ತೆ	1
ಶಾಖಾ ಗ್ರಂಥಾಲಯಗಳು :	
1. ಜಯಲಕ್ಷ್ಮೀಪುರಂ	1
2. ಲಕ್ಷ್ಮೀಪುರಂ	1
3. ಆಶೋಕಪುರಂ	1
4. ಕೆ.ಕೆ. ಸ್ಯಾನಿಟೋರಿಯಂ	1
5. ಗಾಂಧಿನಗರ	1
6. ಸಿದ್ದಾರ್ಥನಗರ	1
7. ಸರಸ್ವತೀಪುರಂ	1
8. ಹೆಬ್ಬಾಳ ಬಡಾವಣೆ	1
9. ಮಾಣಿವಿಲಾಸಪುರಂ	1
10. ಕುವೆಂಪುನಗರ	1
ಒಟ್ಟು	11
ಸೇವಾ ಕೇಂದ್ರಗಳು (ಪಾಚಕಾಲಯಗಳು)	
1. ಆಂಜನೇಯ	1
2. ಹೆಬ್ಬಾಳ	1
3. ಕುರಾಗ್ರಹ	1
4. ಕೆ.ಎಸ್.ಆರ್.ಟಿ	1
ಸಂಚಾರಿ ಗ್ರಂಥಾಲಯ :	1
ಒಟ್ಟು	5

ಕಿರುಗಾವಲು ಕ್ಷೇತ್ರ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸಿಬ್ಬಂದಿ ನೇಮಕಾತಿ

1590 (1726) ಶ್ರೀ ತಮ್ಮಣ್ಣ ಡಿ.ಸಿ (ಕಿರುಗಾವಲು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆ ಕಿರುಗಾವಲು ಕ್ಷೇತ್ರದಲ್ಲಿ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು?

ಅ) ಈ ಆರೋಗ್ಯ ಕೇಂದ್ರಗಳಿಗೆ ಮಂಜೂರಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು? ತುಂಬಲಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು? ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು?

ಇ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಡಾ॥ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 11 (ಹನ್ನೊಂದು)

ಆ) ಮಂಜೂರಾದ ಹುದ್ದೆಗಳು - 116

ಭರ್ತಿ ಮಾಡಿರುವ ಹುದ್ದೆಗಳು - 110

ಖಾಲಿ ಇರುವ ಹುದ್ದೆಗಳು - 56

ಇ) ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಬಾಕಿ ಇರುವ ವೈದ್ಯರ ಹುದ್ದೆಗಳನ್ನು ಸ್ನಾತಕೋತರ ವ್ಯಾಸಂಗವನ್ನು ಪೂರೈಸಿ ಬರುವ ವೈದ್ಯರುಗಳನ್ನು ನೇಮಕ ಮಾಡಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಅಂತಿಮಗೊಂಡ ತಾತ್ಕಾಲಿಕ ಪಟ್ಟಿಯು ಪ್ರಕಟಗೊಳಿಸಿದ ನಂತರ ಉಳಿದ ಹುದ್ದೆಗಳನ್ನು ತುಂಬಲಾಗುವುದು.

ಈ) ಅರೆ ವೈದ್ಯಕೀಯ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಬರಿಸುವ ಸಲುವಾಗಿ ಪ್ರಕ್ರಿಯೆಯಲ್ಲಿದೆ. ಈ ಹುದ್ದೆಗಳನ್ನು ನೇರ ನೇಮಕಾತಿ, ಗುತ್ತಿಗೆ ಆಧಾರದ ಮೂಲಕ ನೇಮಕ ಮಾಡಲಾಗುತ್ತಿದೆ.

ರಾಜ್ಯದಲ್ಲಿ ಅನುದಾನ ರಹಿತ ಶಾಲೆಗಳು

1592 (1790) ಶ್ರೀ ವಡ್ನಾಳ್ ರಾಜಣ್ಣ (ಚನ್ನಗಿರಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಅನುದಾನರಹಿತ ಶಾಲೆಗಳಿವೆ?

ಆ) ಈ ಬಗ್ಗೆ ಸರ್ಕಾರದ ನಿಲುವೇನು?

ಇ) ಅನುದಾನರಹಿತ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳ ಸಂಖ್ಯೆ ಎಷ್ಟು?

ಈ) ಅನುದಾನರಹಿತ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರುಗಳ ಸಂಖ್ಯೆ ಎಷ್ಟು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ಖಾಸಗಿ ಪ್ರಾಥಮಿಕ ಶಾಲೆ - 4212

ಖಾಸಗಿ ಪ್ರೌಢಶಾಲೆಗಳು - 3393

ಆ) ದಿನಾಂಕ: 1-6-87ರ ನಂತರ ಪ್ರಾರಂಭಿಸಿದ ಶಾಲೆಗಳು ಶಾಶ್ವತ ಅನುದಾನರಹಿತ ಶಾಲೆಗಳಾಗಿರುತ್ತವೆ. ಇವುಗಳಿಗೆ ಅನುದಾನ ನೀಡಲು ಪ್ರಸ್ತುತ ನೀತಿಯನುಸಾರ ಅರ್ಹರಲ್ಲ.